ಸಂಪಾದಕೀಯ



# ಭವ್ಯ ವ್ಯಕ್ತಿತ್ವದ ಅಗೋಚರ ಮುಖಗಳು

‘‘ಹಸಿರು ಹುಲ್ಲಿನ ಎಳೆಯೊಂದರಲ್ಲಿ ಇಬ್ಬನಿಯ ಬಿಂದು ಕುಳಿತಿತ್ತು; ಬಿಸಿಲು ಮೇಲೇರಿ ಬಂದಾಗ ಅದು ಮಿನುಗತೊಡಗಿತು; ಸೂರ್ಯನ ಬಿಂಬವನ್ನೇ ಹೊತ್ತು ಥಳಥಳಿಸುತ್ತಿತ್ತು. ನಿಧಾನವಾಗಿ ಬಿಸಿಲಲ್ಲಿ ಕರಗಿ ಮರೆಯಾಯಿತು...’’

ಹಲವು ಬಾರಿ ಕವಿತೆಗಳಲ್ಲಿ ಇಣುಕುವ ಭಾವವಿದು. ನಿಜವಾಗಿ ನೋಡಿದರೆ, ನಮ್ಮೆಲ್ಲರ ಜೀವನ ಇದೇ ರೀತಿ. ಎಲ್ಲಿಂದಲೋ ಬರುತ್ತೇವೆ, ಇಬ್ಬನಿಯಂತೆ. ಏನೆಲ್ಲ ಅರಿತುಕೊಳ್ಳುತ್ತೇವೆ, ಮಿನುಗುತ್ತೇವೆ. ಕೊನೆಗೊಮ್ಮೆ ಮರೆಯಾಗುತ್ತೇವೆ — ಅದೇ ಇಬ್ಬನಿಯಂತೆ. ಮಿನುಗುವ ಕ್ರಿಯೆಯೇ ಅತ್ಯಂತ ರೋಚಕ, ಮಹತ್ವಪೂರ್ಣ ಮತ್ತು ಅತ್ಯಂತ ಸೌಂದರ್ಯದಿಂದ ಕೂಡಿದ್ದು. ಸ್ವಾಮಿ ವಿವೇಕಾನಂದರನ್ನು ಅರಿತುಕೊಳ್ಳುವುದೆಂದರೆ ಹೀಗೆಯೇ - ನಾವು ಇಬ್ಬನಿ ಬಿಂದುಗಳು; ಅವರು ಮಹಾಮಹಿಮ ಸೂರ್ಯ! ಅವರನ್ನರಿತು ನಮ್ಮ ಬಾಳು ಬೆಳಗಿದರೆ, ನಮ್ಮ ಕ್ಷಣಿಕ ಬಾಳು ಸಾರ್ಥಕ.

## ಅಗೋಚರ ವ್ಯಕ್ತಿತ್ವ

ಪ್ರಪಂಚದಲ್ಲಿ ಆಗಿಹೋದ ಹಲವು ಮಂದಿ ಮಹಾತ್ಮರಿಗೆ ಹೋಲಿಸಿದರೆ ಸ್ವಾಮೀಜಿ ತೀರ ಇತ್ತೀಚಿನವರು; ಬುದ್ಧನಂತೆ, ರಾಮ- ಕೃಷ್ಣರಂತೆ, ಏಸುಕ್ರಿಸ್ತನಂತೆ ಎಂದೋ ಆಗಿ ಹೋದವರಲ್ಲ. ಹಿಂದಿನ ಮಹಾತ್ಮರ ಜೀವನವೆಲ್ಲವೂ ಹಲವಾರು ಬಗೆಯಲ್ಲಿ ಐತಿಹಾಸಿಕವಲ್ಲದ ಅನೇಕ ಸಂಗತಿಗಳೊಂದಿಗೆ ಸೇರಿಕೊಂಡಿವೆ; ಹಲವು ಮಾಹಿತಿಗಳು ಅವರ ವ್ಯಕ್ತಿತ್ವವನ್ನು ಮಸುಕಾಗಿಸುತ್ತವೆ. ಆದರೆ ಇದಕ್ಕೆ ಅಪವಾದವೆಂದರೆ ಶ್ರೀರಾಮಕೃಷ್ಣ - ಶ್ರೀಮಾತೆ-ಸ್ವಾಮೀಜಿ. ಅವರ ಜೀವನದ ವಿವರಗಳೆಲ್ಲವೂ ಅತ್ಯಂತ ನಂಬಲರ್ಹವಾದ ವ್ಯಕ್ತಿಗಳಿಂದ, ನೇರವಾಗಿ ಅವರೊಂದಿಗೆ ಬಾಳಿಬದುಕಿದ ವ್ಯಕ್ತಿಗಳಿಂದ ರಚಿತವಾಗಿದೆ. ಈ ದೃಷ್ಟಿಯಿಂದ ಸ್ವಾಮಿ ವಿವೇಕಾನಂದರ ಜೀವನವನ್ನು ಅರಿತುಕೊಳ್ಳುವುದು ಅತ್ಯಂತ ಸುಲಭ ಎನ್ನಬಹುದು; ಆದರೆ ಅವರ ವ್ಯಕ್ತಿತ್ವವನ್ನು ನಾವು ಅರಿತುಕೊಳ್ಳಲು ಆರಂಭಿಸಿದಂತೆಲ್ಲ ಒಂದು ಸತ್ಯ ನಮಗೆ ಮನದಟ್ಟಾಗುತ್ತದೆ - ಅವರನ್ನು ಅರಿತಷ್ಟೂ ಅವರು ಅಗೋಚರರಾಗುತ್ತಾರೆ! ಜೀವನದ ವಿವಿಧ ಘಟನೆಗಳು, ವಿವರಗಳು, ದಾಖಲೆಗೊಂಡ ಹಲವು ಅಂಶಗಳು ಕಟ್ಟಿಕೊಡುವ ಅವರ ಚಿತ್ರ ಒಂದಾದರೆ, ಅವುಗಳ ನಡುವೆ ನಮಗೆ ಕಾಣಿಸದೆ ಹೋಗುವ, ಊಹೆ-ಕಲ್ಪನೆಗಳಿದ ನಿರ್ಮಿಸಿಕೊಳ್ಳಲಾಗದ, ತರ್ಕಬದ್ಧ ಚಿತ್ರಣಕ್ಕೆ ನಿಲುಕದ ಸ್ವಾಮೀಜಿಯವರ ವ್ಯಕ್ತಿತ್ವದ ಆಯಾಮಗಳು ಅನೇಕ. ಅವರ ವ್ಯಕ್ತಿತ್ವವನ್ನು ಅರಿಯುತ್ತ ಅವರನ್ನು ನಾವು ಹಿಂಬಾಲಿಸುತ್ತೇವೆ; ನಾವು ಎಷ್ಟು ದೂರ ಹೋಗುತ್ತೇವೋ, ಅವರೂ ಅಷ್ಟೇ ದೂರ ದೂರವಾಗುತ್ತ ಅದೃಶ್ಯರಾಗುತ್ತಾರೆ. ಎಂತಹ ಆಶ್ಚರ್ಯವಿದು!

## ಮಾನವ ದೃಷ್ಟಿಯಿಂದ

‘ಸ್ವಾಮಿ ವಿವೇಕಾನಂದ’ ಎಂಬ ವ್ಯಕ್ತಿಯೊಬ್ಬರು ಪ್ರಪಂಚದಲ್ಲಿ ಆಗಿಹೋದರು; ಆದ್ದರಿಂದ ಅವರು ಒಬ್ಬ ವ್ಯಕ್ತಿ ಎಂದು ಹೇಳುವುದೇನೋ ಸುಲಭ. ಹೊರನೋಟದ ಗ್ರಹಿಕೆಯದು. ವ್ಯಕ್ತಿತ್ವ ಒಂದಲ್ಲದೆ ಹಲವುಂಟೆ? — ಎಂದು ತರ್ಕ ಮಾಡುವುದೂ ಅಷ್ಟೇ ಸಹಜ. ಆದರೆ ಅವರ ವ್ಯಕ್ತಿತ್ವದ ಆಳಕ್ಕೆ ಇಳಿದು ನೋಡಿದಾಗ ಅವರು ಎಷ್ಟೊಂದು ಬಹುಮುಖವಾದ ಆಯಾಮಗಳನ್ನು ಹೊಂದಿದ್ದರು, ಹಾಗೂ ವಿವಿಧ ಸಂದರ್ಭಗಳಲ್ಲಿ ಹೇಗೆ ಕೆಲವು ಆಯಾಮಗಳನ್ನು ವ್ಯಕ್ತಗೊಳಿಸಿದರು ಎಂಬ ಸಂಗತಿ ತಿಳಿದು ಬರುತ್ತದೆ. ನಮಗರ್ಥವಾಗದ ದೈವೀ ವ್ಯಕ್ತಿತ್ವ ಒಂದೆಡೆ, ಜಗತ್ತಿಗೆ ದಿವ್ಯಸಂದೇಶವನ್ನು ಸಾರಿದ ಗುರು-ವ್ಯಕ್ತಿತ್ವ ಇನ್ನೊಂದೆಡೆ; ಎಲ್ಲರ ನಡುವೆ ಮಾನವನಾಗಿ ನಡೆದಾಡಿದ - ಸಹಜ ಸಾಮಾನ್ಯ ಮಾನವ ವ್ಯಕ್ತಿತ್ವ ಇನ್ನೊಂದೆಡೆ.

ಮೊದಲಿಗೆ ಮಾನವ ವ್ಯಕ್ತಿತ್ವವನ್ನು ನೋಡೋಣ. ಇದು ಎಲ್ಲರಿಗೂ ಗ್ರಾಹ್ಯವಾದ, ರಕ್ತಮಾಂಸಗಳನ್ನು ತುಂಬಿಕೊಂಡ ದೈಹಿಕ ಆಯಾಮವನ್ನು ಒಳಗಂಡ ವ್ಯಕ್ತಿತ್ವ; ಸ್ವಾಮೀಜಿ ನಮ್ಮ ನಿಮ್ಮೆಲ್ಲರಂತೆ ಧರೆಯಲ್ಲಿ ಹುಟ್ಟಿ ನಡೆದಾಡಿದ ವ್ಯಕ್ತಿಯಾಗಿ ಕಾಣಿಸಿಕೊಂಡವರು. ಬದುಕಿದ್ದು ಕೇವಲ ನಲುವತ್ತು ವರ್ಷ: ಆದರೆ ಜಗತ್ತಿಗೆ ಕೊಟ್ಟುಹೋದದ್ದು?- ಅಪರಿಮಿತವಾದದ್ದನ್ನು. ಸಾಧಿಸಿದ್ದು?-ಮಾನವ ಮಾತ್ರರಿಗೆ ಅಸಾಧ್ಯವೆಂಬುದನ್ನು. ಅವರ ಜೀವನದ ಅವಧಿ ಕಡಿಮೆ, ಆದರೆ ಈ ಅವಧಿಯಲ್ಲಿ ಎಂತೆಂತಹ

ಅದ್ಭುತಗಳು ನಡೆದವು, ಏನೆಲ್ಲ ಅನುಭವಗಳು ಬಂದುಹೋದವು, ಅದೆಂತಹ ಮಹತ್ತರ ಅನ್ವೇಷಣೆಯಾಯಿತು ಅವರ ಜೀವನ! ಐತಿಹಾಸಿಕವೆನ್ನಬಹುದಾದ ಮುಖ್ಯ ಘಟನೆಗಳೆಲ್ಲ ಒಂದಾದ ಮೇಲೊಂದರಂತೆ ಅವರ ಜೀವನದಲ್ಲಿ ನಿಬಿಡವಾಗಿ ಕಂಡುಬರುತ್ತವೆ. ಆಧುನಿಕ ಮಾನವ ಹಲವು ಶತಮಾನಗಳ ಅವಧಿಯಲ್ಲಿ ಒಂದೊಂದಾಗಿ ಕಂಡುಕೊಳ್ಳುವ ಭೌತಿಕ-ವೈಚಾರಿಕ- ಆಧ್ಯಾತ್ಮಿಕ ಸತ್ಯಗಳೆಲ್ಲ ಸ್ವಾಮಿ ವಿವೇಕಾನಂದರ ಜೀವನದಲ್ಲಿ ಕ್ಷಿಪ್ರವಾಗಿ ಅನಾವರಣಗೊಳ್ಳುತ್ತ ಹೋದವು. ಒಬ್ಬ ವ್ಯಕ್ತಿ ಇಷ್ಟು ಅಲ್ಪಾವಧಿಯಲ್ಲಿ ಇಷ್ಟನ್ನೆಲ್ಲ ಹೇಗೆ ಅರಿತುಕೊಳ್ಳು ಸಾಧ್ಯ ? ಇಂಥ ಅಪ್ರತಿಮ ಜ್ಞಾನ, ಭಾವತೀವ್ರತೆ, ಆಧ್ಯಾತ್ಮಿಕ ವಿಕಾಸ ಒಬ್ಬ ವ್ಯಕ್ತಿಗೆ ಹೇಗೆ ಬಂದೊದಗಲು ಸಾಧ್ಯ ?-ಎಂದು ನಾವು ನಿಬ್ಬೆರಗಾಗುತ್ತೇವೆ.

ಸ್ವಾಮೀಜಿ ಪ್ರಪಂಚದಲ್ಲೆಡೆ ಸಾರಿದ ಸಂದೇಶಗಳಲ್ಲಿ ಬಹಳ ಮುಖ್ಯವಾದದ್ದು – ಮಾನವನ ದಿವ್ಯತೆ. ಮಾನವನ ಆಂತರ್ಯದಲ್ಲಿ ಭಗವಂತನೇ ಅಡಗಿದ್ದಾನೆ; ಅದನ್ನು ಬಾಹ-ಆಂತರಿಕ ಸಾಧನೆಗಳಿಂದ ಪ್ರಕಟಪಡಿಸುವುದು ಪ್ರತಿಯೊಬ್ಬನಿಗೂ ಸಾಧ್ಯ ಎಂದು ಸ್ವಾಮೀಜಿ ಸಾರಿದರು. ವೇದ-ಉಪನಿಷತ್ತುಗಳು ಸಾರುವ ಈ ಸತ್ಯವನ್ನು ವೇದಾಂತ ದರ್ಶನವು ತಾರ್ಕಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ವಿಶದವಾಗಿ ವಿಶ್ಲೇಷಿಸಿ ನಿರೂಪಿಸಿದೆ; ಆದರೆ ಅದು ಎಲ್ಲ ಮಾನವವರ್ಗದ ಜೀವನಕ್ರಮವಾಗಿ ರೂಪುಗೊಳ್ಳುವುದು ಸಾಧ್ಯವಾಗಲಿಲ್ಲ. ಶ್ರೀರಾಮಕೃಷ್ಣರು ಜಾತಿ-ಧರ್ಮ-ಪಂಥಗಳ ಭೇದಭಾವಗಳನ್ನೆಲ್ಲ ತೊಡೆದುಹಾಕಿ, ಪ್ರತಿಯೊಬ್ಬರೂ ಭಗವಂತನನ್ನು ಕಾಣಬೇಕು ಎಂಬ ಆದರ್ಶವನ್ನು ಮನುಕುಲದ ಮುಂದಿಟ್ಟರು. ವೇದಾಂತ ಹಾಗೂ ಶ್ರೀರಾಮಕೃಷ್ಣರು ಪ್ರತಿಪಾದಿಸಿದ ಈ ಮಾನವನ ದಿವ್ಯ ಆಯಾಮವನ್ನು ತಮ್ಮ ಅಭೂತಪೂರ್ವ ವಾಗ್ಝರಿಯೊಂದಿಗೆ ಪ್ರಪಂಚದಾದ್ಯಂತ ಪಸರಿಸಿದ ಕೀರ್ತಿ ಸ್ವಾಮೀಜಿಯವರದು. ದಿವ್ಯ ನೆಲೆಯ ಭಗವತ್ ತತ್ತ್ವವು ಮಾನವನ ಆಂತರ್ಯದಲ್ಲಿ ಪ್ರಕಟಗೊಂಡು, ಜೀವವು ಶಿವನಾಗಿ ಮಾರ್ಪಡುವ ಪರಮಾದ್ಭುತ ವಿಕಸನವನ್ನು ಸ್ವಾಮೀಜಿ ತಮ್ಮ ಆದರ್ಶವನ್ನಾಗಿ ಕಂಡುಕೊಂಡರು. ‘‘ನನ್ನ ದೇಹ ಬಿದ್ದು ಹೋಗುವುದು. ಆದರೆ ನನ್ನ ಮಾತುಗಳು ನಿರಂತರ ಮಾನವರನ್ನು ಪ್ರೇರೇಪಿಸುತ್ತಾ ಹೋಗುವುವು. ಪ್ರತಿಯೊಬ್ಬ ಮಾನವನೂ ತಾನು ಭಗವಂತನಲ್ಲಿ ಒಂದಾಗಿದ್ದೇನೆ ಎಂದು ಕಂಡುಕೊಳ್ಳುವವರೆಗೂ ನಾನು ಕೆಲಸ ಮಾಡುವುದನ್ನು ನಿಲ್ಲಿಸಲಾರೆ’’ ಎನ್ನುತ್ತಾರೆ ಸ್ವಾಮೀಜಿ. ಮಾನವನ ದಿವ್ಯ ಸ್ವಭಾವವನ್ನು, ಅಮೃತಸ್ವರೂಪವನ್ನು ಉಪನಿಷತ್ತುಗಳ ಅಂತರಂಗದಿಂದ ಹೊರಗೆ ತಂದು, ಇಷ್ಟು ಸ್ಪಷ್ಟವಾದ ನುಡಿಗಳಲ್ಲಿ ಜನರ ಮುಂದೆ ಬೇರೆ ಯಾರೂ ಸಾರಿರಲಿಲ್ಲ. ನಮ್ಮ ಪ್ರಾಚೀನ ತತ್ತ್ವ, ದರ್ಶನ, ಆಧ್ಯಾತ್ಮಿಕ ಸತ್ಯಗಳನ್ನು ಹಾಗೆ ಸ್ಪಷ್ಟವಾಗಿ ಸಾರುವುದಕ್ಕೆ ಸ್ವಾಮೀಜಿಯವರಿಗಿದ್ದ ಅರ್ಹತೆಯೆಂದರೆ – ತಮ್ಮ ಗುರುದೇವನ ಆಶೀರ್ವಾದ, ಹಾಗೂ ಆಧ್ಯಾತ್ಮಿಕ ಅನುಭವಗಳು. ಈ ಕಾರಣದಿಂದಲೇ ಸ್ವಾಮೀಜಿಯವರ ಮಾತುಗಳಲ್ಲಿ ಅಂತಹ ಅದ್ಭುತ ಶಕ್ತಿ, ಹೊಸತನ ಹಾಗೂ ಸ್ಫೂರ್ತಿಯ ಕಿಡಿ ವೀರಯೋಧನ ಖಡ್ಗದಂತೆ ಝಳಪಿಸುತ್ತವೆ.

### ‘ನರೇನ್ ಲೋಕಶಿಕ್ಷಣ ನೀಡುತ್ತಾನೆ’

ಶ್ರೀರಾಮಕೃಷ್ಣರ ಬಳಿಗೆ ಯುವಕ ನರೇಂದ್ರ ಹೋಗಿಬರುತ್ತಿದ್ದ. ಅವನ ತಾರುಣ್ಯದ ದಿನಗಳಲ್ಲೇ ಶ್ರೀರಾಮಕೃಷ್ಣರು ಅವನ ಭವಿಷ್ಯವನ್ನು ಕಂಡವರಂತೆ ‘ನರೇನ್ ಶಿಕ್ಷಾ ದೇಬೇ’ (ನರೇಂದ್ರನು ಲೋಕಕ್ಕೆ ಶಿಕ್ಷಣ ನೀಡುತ್ತಾನೆ) ಎಂದು ನುಡಿದಿದ್ದರು. ಆಗ ಈ ಭವಿಷ್ಯವಾಣಿ ಯಾರಿಗೂ ಅರ್ಥವಾಗಿರಲಿಲ್ಲ; ಆದರೆ ಮುಂದೆ ಇದು ನಿಜವಾಯಿತು. ಶ್ರೀರಾಮಕೃಷ್ಣರೇ ಹೇಳುವಂತೆ, ಲೋಕಶಿಕ್ಷಣ ಎಲ್ಲರಿಗೂ ಸಾಧ್ಯವಿಲ್ಲ, ಯಾರಿಗೆ ಭಗವಂತನಿಂದ ಆದೇಶ ದೊರಕಿದೆಯೋ ಅವನು ಮಾತ್ರ ಅದನ್ನು ಮಾಡಬಲ್ಲ. ಅವತಾರ ಪುರುಷರಾದ ಶ್ರೀರಾಮಕೃಷ್ಣರು ಸಪ್ತರ್ಷಿಮಂಡಲದಿಂದ ನರೇಂದ್ರನನ್ನು ಕರೆತಂದರು – ತಮ್ಮ ಅವತಾರ ಕಾರ್ಯದ ಸಹಾಯಕ್ಕಾಗಿ, ತಮ್ಮ ಸಂದೇಶಗಳನ್ನು ಜನರೆಡೆಗೆ ಕೊಂಡೊಯ್ಯುವುದಕ್ಕಾಗಿ. ಈ ದೃಷ್ಟಿಯಿಂದ, ಸ್ವಾಮೀಜಿ ಸಾಕ್ಷಾತ್ ಭಗವಂತನಿಂದಲೇ ಆದೇಶ ಪಡೆದವರು. ಇನ್ನೊಂದು ದೃಷ್ಟಿಯಿಂದ, ಸ್ವಾಮಿ ವಿವೇಕಾನಂದರು ಶ್ರೀಮಾತೆಯವರ ಆಶೀರ್ವಾದದ ಬಲದಿಂದ ಪಾಶ್ಚಾತ್ಯ ದೇಶಗಳಲ್ಲಿ ತಮ್ಮ ಗುರುದೇವನ ಹಾಗೂ ಭಾರತದ ಸನಾತನ ಸಂದೇಶಗಳನ್ನು ಸಾರಲು ಸಾಧ್ಯವಾಯಿತು. ಆಧ್ಯಾತ್ಮಿಕ ಬೆಳಕನ್ನು ತೋರಿಕೊಡುವವನೇ ಗುರು; ಈ ಅರ್ಥದಲ್ಲಿ ಸ್ವಾಮೀಜಿ ಸಹಸ್ರಾರು ಮಂದಿ ತರುಣರಿಗೆ ತಮ್ಮ ಜೀವಿತ ಕಾಲದಲ್ಲೇ ಗುರುವಾದರು. ಅವರು ಕಾಲವಾದ ನಂತರವೂ ಭಾರತದೆಲ್ಲೆಡೆ, ಪ್ರಪಂಚದಾದ್ಯಂತ ಅವರ ಸ್ಫೂರ್ತಿಯ ವಾಣಿಗಳಿಂದ ಪ್ರೇರಿತರಾಗಿ ಅನೇಕರು ಆಧ್ಯಾತ್ಮಿಕ ಪಥದತ್ತ ಹೊರಳಿದರು. ಈ ಆಧ್ಯಾತ್ಮಿಕ ವಾಹಿನಿ ಇನ್ನೂ ಹರಿಯುತ್ತಲೇ ಇದೆ. ಸ್ವಾಮೀಜಿಯವರ ಪ್ರಭಾವ ಎಲ್ಲೆಡೆ ಹರಡುತ್ತಿದೆ. ಇದು ಅವರ ವ್ಯಕ್ತಿತ್ವದ ಒಂದು ಪ್ರಧಾನ ಆಯಾಮ – ಆಧ್ಯಾತ್ಮಿಕ ಗುರುವಿನ ಪಾತ್ರ.

### ದೈವೀ ಆಯಾಮ

ಸ್ವಾಮಿ ವಿವೇಕಾನಂದರು ಶಿವಾಂಶ ಸಂಭೂತರೆಂದೂ, ಸಾಕ್ಷಾತ್ ಪರಶಿವನೇ ವಿವೇಕಾನಂದರಾಗಿ ಅವತಾರವೆತ್ತಿ ಬಂದರೆಂದೂ ಹಲವೆಡೆ ವ್ಯಕ್ತವಾಗಿದೆ. ಅವರ ಜೀವನ ಚರಿತ್ರೆಗಳಲ್ಲಿ ಈ ವಿಚಾರ ಸ್ಪಷ್ಟವಾಗಿ ಉಲ್ಲೇಖಗೊಂಡಿದ್ದರೂ, ಹೆಚ್ಚು ವ್ಯಾಪಕವಾಗಿ ಈ ಆಯಾಮವನ್ನು ಪ್ರಚುರಪಡಿಸಿದಂತೆ ಕಂಡುಬಂದಿಲ್ಲ. ಇದಕ್ಕೆ ಕಾರಣ ಎರಡು: ೧) ಅನೇಕರು ವ್ಯಕ್ತಿಗಳ ದೈವೀ ಆಯಾಮದಲ್ಲಿ ನಂಬಿಕೆ ಹೊಂದಿಲ್ಲದಿರುವುದು. ೨) ಸ್ವಾಮೀಜಿಯವರ ಜೀವನದುದ್ದಕ್ಕೂ ಅವರ ಅತಿಮಾನುಷ ವ್ಯಕ್ತಿತ್ವಕ್ಕಿಂತ ಮಾನವ ವ್ಯಕ್ತಿತ್ವವೇ ಹೆಚ್ಚು ವ್ಯಕ್ತಗೊಂಡಿರುವುದು. ಹೀಗಿದ್ದರೂ, ಅವರ ಜೀವನದಲ್ಲಿ ನಡೆದಿರುವ ಕೆಲವು ಘಟನೆಗಳು ಅವರ ದೈವೀ ವ್ಯಕ್ತಿತ್ವವನ್ನು ಅಲ್ಲಗಳೆಯದೆ ಸ್ವೀಕರಿಸುವಂತೆ ಮಾಡುತ್ತವೆ. ಶ್ರೀರಾಮಕೃಷ್ಣರು ದಿವ್ಯಸ್ಪರ್ಶದ ಮೂಲಕ ನರೇಂದ್ರನಿಗೆ ಆಧ್ಯಾತ್ಮಿಕ ತರಂಗಗಳನ್ನು

ಪ್ರವಹಿಸಿದಾಗ, ಅವನಿಗಾದ ಅದ್ವೈತಾನುಭೂತಿಯು ಅವನ ಇಡೀ ವ್ಯಕ್ತಿತ್ವವನ್ನೇ ಹೊಸ ಪ್ರಪಂಚದೆಡೆಗೆ ಕರೆದೊಯ್ದಿತು. ಅದೇ ರೀತಿ, ಪಾಶ್ಚಾತ್ಯ ದೇಶಗಳಲ್ಲಿ ನಿರ್ಗತಿಕ ಸಂನ್ಯಾಸಿಯಂತೆ ಸುತ್ತುತ್ತಿದ್ದಾಗ ಅವರಿಗೆ ಲಭಿಸಿದ ದೈವೀ ಸಹಾಯ, ಕನ್ಯಾಕುಮಾರಿಯ ಸಮುದ್ರದ ಬಂಡೆಯ ಮೇಲೆ ಧ್ಯಾನನಿರತರಾಗಿ ಕುಳಿತಿದ್ದಾಗ ಲಭಿಸಿದ ದೈವೀ ಆದೇಶ, ಅಷ್ಟೇಕೆ – ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮೊದಲ ಬಾರಿಗೆ ಭಾಷಣ ಮಾಡಿದಾಗ ಅವರ ಮೂಲಕ ಹೊರಹೊಮ್ಮಿದ ದಿವ್ಯದುಂದುಭಿ – ಇವೆಲ್ಲವೂ ಸ್ವಾಮೀಜಿಯವರ ದೈವೀ ಆಯಾಮದ ಸೂಚಕಗಳು.

### ಸ್ವಾಮೀಜಿ ಕೊಡುಗೆ: ಭಾರತಕ್ಕೆ

ಸ್ವಾಮೀಜಿಯವರನ್ನು 'ವಿಶ್ವಮಾನವ' ಎನ್ನುತ್ತೇವೆ. ಇದು ನಿಜವಾದರೂ, ಅವರ ಕೊಡುಗೆ ವಿಶೇಷವಾಗಿ ಭಾರತಕ್ಕೆ ಎಂಬ ವಾಸ್ತವತೆಯನ್ನು ನಾವು ಮನಗಾಣಬೇಕು. ಅವರ ಆಗಮನ ಕಾಲದಲ್ಲಿ ಭಾರತ ದೇಶದ ಪರಿಸ್ಥಿತಿ ದಾರುಣವಾಗಿತ್ತು. ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ದೇಶವು ಪರಕೀಯ ಪ್ರಭಾವಕ್ಕೆ ಒಳಗಾಗಿ ತನ್ನ ಸತ್ವವನ್ನೆಲ್ಲ ಕಳೆದುಕೊಂಡಿತ್ತು. ದೇಶದ ಧರ್ಮ, ಸಂಸ್ಕೃತಿ, ಸಂಪ್ರದಾಯಗಳನ್ನು ಲೇವಡಿ ಮಾಡಲಾಗುತ್ತಿತ್ತು. ಆಧುನಿಕತೆಯ ಗಾಳಿ ನಾಗರಿಕ ಸಮಾಜವನ್ನು ಎಷ್ಟೇ ಪ್ರಭಾವಿಸಿದ್ದರೂ, ಬ್ರಿಟಿಷರ ಅನುಕರಣೆಯಿಂದಾಗಿ ನಮ್ಮ ಪರಂಪರೆಯನ್ನು ತೆಗಳುವ ಪ್ರವೃತ್ತಿ ಅಧಿಕವಾಗಿತ್ತು. ಸ್ವಾಮೀಜಿ ಪರಿವ್ರಾಜಕರಾಗಿ ದೇಶದುದ್ದಗಲಕ್ಕೂ ಸಂಚರಿಸಿದಾಗ ಈ ದೇಶದ ಜನರ ನಿಜವಾದ ಪರಿಸ್ಥಿತಿ ಅವರಿಗೆ ಅರ್ಥವಾಯಿತು. ಬಡತನ, ಅನಕ್ಷರತೆ, ಜಾತೀಯತೆ, ಮತಪಂಗಡಗಳ ಬಿಕ್ಕಟ್ಟು ಇವೇ ನಮ್ಮ ದೇಶದ ಅವನತಿಗೆ ಕಾರಣವೆಂಬುದನ್ನು ಅವರು ಮನಗಂಡರು. ಎಲ್ಲ ಸಮಸ್ಯೆಗಳಿಗೆ ಪರಕೀಯರನ್ನು ದೂರುವ ಬದಲು, ನಮ್ಮ ಸಮಾಜದಲ್ಲೇ ಇರುವ ಅನಿಷ್ಟಗಳನ್ನು ಹೊಡೆದೋಡಿಸಿ, ನಮ್ಮ ಜನರಲ್ಲಿ ಏಕತೆಯನ್ನೂ ರಾಷ್ಟ್ರಪ್ರೇಮವನ್ನೂ ನವೋತ್ಥಾನದ ಕಿಡಿಯನ್ನೂ ಹುಟ್ಟುಹಾಕುವುದು ಅಗತ್ಯವೆಂಬುದನ್ನು ಅವರು ಮನಗಂಡರು. ಅವರು ಅಮೆರಿಕವೇ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಪ್ರಚಾರವನ್ನು ಮಾಡುವಾಗಲೂ ಅವರ ಗಮನವೆಲ್ಲ ಇದ್ದುದು ಭಾರತದ ಉದ್ಧಾರ ಹೇಗೆ ಸಾಧ್ಯವಾದೀತು ಎಂಬುದರ ಬಗ್ಗೆಯೇ.

ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ವಾಮೀಜಿಯವರ ಸ್ಫೂರ್ತಿಯುತ ಭಾಷಣಗಳು ಪ್ರೇರಕ ಶಕ್ತಿಯಾಗಿದ್ದುವು ಎಂಬುದು ಸರ್ವವಿದಿತವಾಗಿದೆ. ಅದೇ ರೀತಿ ಭಾರತದ ಯುವಜನರಲ್ಲಿ ಆಧ್ಯಾತ್ಮಿಕತೆ, ಸಂಸ್ಕೃತಿ ಹಾಗೂ ದೇಶಪ್ರೇಮದ ಭಾವಗಳನ್ನು ತುಂಬುವಲ್ಲಿ ಸ್ವಾಮೀಜಿಯವರ ಪ್ರಭಾವ ಅತ್ಯಂತ ದಟ್ಟವಾಗಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಸ್ಸಾಮಿನಿಂದ ಗುಜರಾತಿನವರೆಗೆ ಸ್ವಾಮೀಜಿ ನುಡಿಗಳು ಮನೆಮಾತಾದುವು. ಸ್ವಾಮೀಜಿಯವರು ದೇಹತ್ಯಾಗ ಮಾಡಿ ೧೨೫ ವರ್ಷಗಳೇ ಸಂದುಹೋಗಿವೆ; ಆದರೆ ಅವರ ಪ್ರಭಾವ ಭಾರತದ ಜನತೆಯ ಮೇಲೆ ಇನ್ನೂ ದಟ್ಟವಾಗಿಯೇ ಇದೆ. ಕಾಲ-ದೇಶಗಳನ್ನು ಮೀರಿ ನಿಂತ ವ್ಯಕ್ತಿತ್ವ ಸ್ವಾಮೀಜಿಯವರದು; ಆದ್ದರಿಂದ ಅವರ ಪ್ರಭಾವವೂ ಕಾಲ, ದೇಶಗಳನ್ನು ಮೀರಿ ವ್ಯಾಪಿಸುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ.

### ಸಮಸ್ತ ವಿಶ್ವಕ್ಕೆ ಸ್ವಾಮೀಜಿಯವರ ಕೊಡುಗೆ

ಕಲ್ಕತ್ತೆಯಲ್ಲಿ ಹುಟ್ಟಿ ಬೆಳೆದ ತರುಣನೊಬ್ಬ ಶ್ರೀರಾಮಕೃಷ್ಣರ ಶಿಷ್ಯನಾಗಿದ್ದವನು, ಅವರ ಗರಡಿಯಲ್ಲಿ ತರಬೇತಿ ಪಡೆದ; ಬಳಿಕ ತನ್ನ ವಲಯವನ್ನು ವಿಸ್ತರಿಸಿ ಬಂಗಾಳದ ಹೊರಗೂ ತನ್ನ ದೃಷ್ಟಿಯನ್ನು ವ್ಯಾಪಕಗೊಳಿಸಿದ. ಭಾರತದೆಲ್ಲೆಡೆ ಸಂಚರಿಸಿ ಅದು ದೇಶವ್ಯಾಪಕವಾಯಿತು; ಒಂದರ್ಥದಲ್ಲಿ ರಾಷ್ಟ್ರನಿರ್ಮಾಣವನ್ನೇ ಮಾಡಿತು. ಆಗಿನ್ನೂ 'ಒಂದು ರಾಷ್ಟ್ರ'ವೆಂಬ ಕಲ್ಪನೆ ಭಾರತೀಯರಲ್ಲಿ ಸ್ಪಷ್ಟವಾಗಿ ಮೂಡಿರಲಿಲ್ಲ. ಅದನ್ನು ರೂಪಿಸಿದ ಹಲವು ಶಕ್ತಿಗಳಲ್ಲಿ ಸ್ವಾಮೀಜಿಯವರ ರಾಷ್ಟ್ರೀಯ ಕಲ್ಪನೆ ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಸ್ವಾಮೀಜಿಯವರ ವಿಶಾಲ ದೃಷ್ಟಿಕೋನ ಕೇವಲ ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅಪ್ಪಟ ದೇಶಪ್ರೇಮಿಯಾಗಿದ್ದುಕೊಂಡೇ ವಿಶ್ವಮಾನವನಾಗಿ ಬೆಳೆಯಬಹುದು; ನಿಜವಾಗಿ ವಿಶ್ವವಿಶಾಲ ದೃಷ್ಟಿ ಹೊಂದುವುದು ಹೀಗೆ ಮಾತ್ರ ಸಾಧ್ಯವೆಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಅವರ ದೃಷ್ಟಿಯಲ್ಲಿ ವಿಶ್ವಮಾನವನಾಗುವುದೆಂದರೆ ದೇಶೀಯ, ರಾಷ್ಟ್ರೀಯ ಭಾವನೆಯನ್ನು ಅಳಿಸಿಹಾಕುವ ಮೂಢತನವಲ್ಲ; ಈ ಭಾವನೆಗಳ ಗಟ್ಟಿತನದಲ್ಲಿ ದೃಢವಾಗಿ ನಿಂತು, ಎಲ್ಲ ಮಿತಿಗಳನ್ನು ಮೆಟ್ಟಿ ನಿಲ್ಲುವ ವಿಶಿಷ್ಟ ಬಗೆಯ ದೃಷ್ಟಿಕೋನವದು. ಅವರು ಜಗತ್ತಿಗೆ ನೀಡಿದ ಸಂದೇಶ ಕೂಡ ಅದೇ ಬಗೆಯದು: ಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳು ತಮ್ಮ ವಿಶಿಷ್ಟತೆಯನ್ನು ಕಾಯ್ದುಕೊಂಡೇ ಪರಸ್ಪರ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳಬೇಕು ಎಂದು. ಆಧ್ಯಾತ್ಮಿಕತೆಯೊಂದೇ ವಿಶ್ವವನ್ನು ಒಂದುಗೂಡಿಸುವ, ಸಮಸ್ತ ಮನುಕುಲವನ್ನು ಏಕತೆಯಿಂದ ಬಂಧಿಸುವ ಶಕ್ತಿ ಎಂಬ ಆಶಯವನ್ನು ಸ್ವಾಮೀಜಿ ದೃಢವಾಗಿ ವ್ಯಕ್ತಪಡಿಸುತ್ತಾರೆ. ಹೀಗೆ ವಿಶ್ವವೆಲ್ಲ ಏಕತೆಯನ್ನು ಹೊಂದಿ ಶಾಂತಿ-ಆನಂದದ ಬದುಕನ್ನು ನಡೆಸುವುದೇ ಅವರ ಕನಸಾಗಿತ್ತು. ಸ್ವಾಮೀಜಿಯವರ ಈ ದೃಷ್ಟಿಕೋನ, ಸಂದೇಶಗಳು ಸಮಸ್ತ ವಿಶ್ವದ ಒಳಿತನ್ನು ಹಾರೈಸುವುದರಿಂದ ಅವು ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತವೆ. ¤

### ಫೆಬ್ರವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಶುಕ್ರವಾರ | ಸ್ವಾಮಿ ವಿವೇಕಾನಂದ ಜಯಂತಿ |
| ೬ | ಮಂಗಳವಾರ | ಏಕಾದಶಿ |
| ೧೧ | ಭಾನುವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| ೧೩ | ಮಂಗಳವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |
| ೨೦ | ಮಂಗಳವಾರ | ಏಕಾದಶಿ |
| ೨೪ | ಶನಿವಾರ | ಸ್ವಾಮಿ ಅದ್ಭುತಾನಂದ ಜಯಂತಿ |